ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂ:ಕಂ:.ವಿವಾದ:61/2015-16 ದಿ: 10-06-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**
ಮಲ್ಲಯ್ಯ ತಂದೆ: ಬೋಗೋಟೆಪ್ಪ
ಊಳೂರು ಗ್ರಾಮ ,ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**
ಕೆ. ಪಾಂಡುರಂಗಪ್ಪ ತಂದೆ:ಹೇಮಾದ್ರಪ್ಪ
ಊಳೂರು ಗ್ರಾಮ ಸಿರುಗುಪ್ಪ ತಾಲೂಕ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಡು ಸಂಖ್ಯೆ |
|---|---|---|---|---|
| ಊಳೂರು ಗ್ರಾಮ | 26 (P) | 1-50 | H-39/2014-15 | 95/2014-15 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ **ಊಳೂರು ಗ್ರಾಮದ** ಸ.ನಂ.26 ಪೈಕಿ ವಿಸ್ತೀರ್ಣ 1-50 ಸೆಂಟ್ಸ್ ಜಮೀನಿಗೆ ಸಂಭಂದಿಸಿದಂತೆ ಸಿರುಗುಪ್ಪ ಉಪನೊಂದಣಿ ಕಛೇರಿ ಪತ್ರ ನಂ:**SRG-1-00104/2015-16 Dt. 7-4-2015** ರ ಪ್ರಕಾರ ಮಲ್ಲಯ್ಯ ತಂಬೆ: ಬೋಗೋಟೆಪ್ಪ ಇವರ ಹೆಸರಿನಲ್ಲಿ ಖಾತೆಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ ಕೆ. ಪಾಂಡುರಂಗಪ್ಪ ತಂದೆ: ಹೇಮಾದ್ರಪ್ಪ ಇವರು ದಿ: 18-4-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು ದಿ: 18-3-2016, 2-4-2016, 29-4-2016, 7-5-2-16, 27-5-2016 ಮತ್ತು 03-6-2016 ರಂದು ಪ್ರಕರಣಕ್ಕೆ ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

...ದಿಗಳಾದ ಮಲ್ಲಯ್ಯ ತಂದೆ: ಬೋಗೋಟೆಪ್ಪ ಊಳೂರು, ಗ್ರಾಮ, ಇವರು ಊಳೂರು ...ದ ಸ.ನಂ.26 ಪೈಕಿ ವಿಸ್ತೀರ್ಣ 1-50 ಸೆಂಟ್ಸ್ ಜಮೀನು ನಾನು ಕೆ. ಪಾಂಡುರಂಗಪ್ಪ ತಂದೆ: ...ಮಾದ್ರಪ್ಪ ಇವರಿಂದ ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿ ಪತ್ರ ನಂ: **SRG-1-00104/2015-16 Dt. 7-4-2015** ರ ಪ್ರಕಾರ ಖರೀದಿ ನೊಂದಣಿ ಮಾಡಿಕೊಂಡು ಹಕ್ಕು ಬದಲಾವಣೆ ಸಂದರ್ಭದಲ್ಲಿ ಮಾರಾಟಗಾರರಾದ ಕೆ. ಪಾಂಡುರಂಗಪ್ಪ ಇವರು ತಮಗೆ ಸಂಪೂರ್ಣ ಮೊತ್ತ ಮುಟ್ಟಿರುವುದಿಲ್ಲವೆಂದು ಹಕ್ಕು ಬದಲಾವಣೆ ಮಾಡುವ ಸಂದರ್ಭದಲ್ಲಿ ದಿ:24-4-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಈಗ ದೊಡ್ಡ ಮನುಷ್ಯರ ಪರಿಷ್ಕಾರ ಮಾಡಿದ ಪ್ರಕಾರ ಸಂಪೂರ್ಣ ಹಣ ಮುಟ್ಟಿದ್ದರಿಂದ ತಮ್ಮ ತಕರಾರು ಅರ್ಜಿಯನ್ನು ಹಿಂದಕ್ಕೆ ಪಡೆದು ಖರೀದಿದಾರರಾದ ನನ್ನ ಹೆಸರಿಗೆ ಹಕ್ಕು ;ಬದಲಾವಣೆ ಮಾಡಲು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು

ಪ್ರತಿವಾದಿಗಳಾದ ಕೆ.ಪಾಂಡುರಂಗಪ್ಪ ತಂದೆ: ಹೇಮಾದ್ರಪ್ಪ ಊಳೂರು ಗ್ರಾಮ ಇವರು ನನ್ನ ಹೆಸರಿನಲ್ಲಿದ್ದ ಊಳೂರು ಗ್ರಾಮದ ಸ.ನಂ.26 ಪೈಕಿ ವಿಸ್ತೀರ್ಣ 1-50 ಸೆಂಟ್ಸ್ ಜಮೀನುಯ ನಾನು ಮಲ್ಲಯ್ಯ ತಂದೆ: ಬೋಗೋಟೆಪ್ಪ ಎಂಬುವವರಿಗೆ ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿ ಪತ್ರ ನಂ: **SRG-1-00104/2015-16 Dt.7-4-2015** ರ ಪ್ರಕಾರ ಖರೀದಿ ನೊಂದಣಿ ಮಾಡಿ ಕೊಟ್ಟಿದ್ದು, ಹಕ್ಕು ಬದಲಾವಣೆ ಸಂದರ್ಭದಲ್ಲಿ ಖರೀದಿ ಸಂಪೂರ್ಣ ಮೊತ್ತ ನನಗೆ ಮುಟ್ಟಿರುವುದಿಲ್ಲವೆಂದು ದಿ:24-4-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತೇನೆ. ಈಗ ದೊಡ್ಡ ಮನುಷ್ಯರ ಪರಿಷ್ಕಾರ ಮಾಡಿದ ಪ್ರಕಾರ ಸಂಪೂರ್ಣ ಹಣ ಮುಟ್ಟಿದ್ದರಿಂದ ನನ್ನ ತಕರಾರು ಅರ್ಜಿಯನ್ನು ಹಿಂದಕ್ಕೆ ಪಡೆದು ಖರೀದಿದಾರ ಮಲ್ಲಯ್ಯ ತಂದೆ: ಬಾಗೋಟೆಪ್ಪ ಇವರ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಬಹುದೆಂದು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿ ಪತ್ರ ನಂ: **SRG-1-00104/2015-16 Dt. 7-4-2015** ರ ಪ್ರಕಾರ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಊಳೂರು ಗ್ರಾಮದ ಸ.ನಂ.26 ಪೈಕಿ ವಿಸ್ತೀರ್ಣ 1-50 ಸೆಂಟ್ಸ್ ಜಮೀನು ಸಿರುಗುಪ್ಪ ಸಬ್‌ರಿಜಿಸ್ಟರ್ ಕಛೇರಿ ಪತ್ರ ನಂ:**SRG-1-00104/2015-16 Dt.7-4-2015** ರ ರನ್ವಯ ಮಲ್ಲಯ್ಯ ತಂದೆ: ಬೋಗೋಟೆಪ್ಪ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 10 -06-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು,
ಕರೂರು

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕರೂರು
ಸಿರುಗುಪ್ಪ ತಾಲೂಕು

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ
3. ಕಛೇರಿ ಕಡತಕ್ಕೆ.